ಕರ್ನಾಟಕ ಸರ್ಕಾರ
ಪೊಲೀಸ್ ಇಲಾಖೆ

ಸಂಖ್ಯೆ:ಸಿಬ್ಬಂದಿ–8/16/ಸಿಓಪಿ/2019

ಪೊಲೀಸ್ ಆಯುಕ್ತರವರ ಕಛೇರಿ
ಬೆಂಗಳೂರು ನಗರ. ದಿ:23/10/2020

# ಎರಡನೆ ತಾತ್ಕಾಲಿಕ ಆಯ್ಕೆಪಟ್ಟಿ

| | |
|---|---|
| **ವಿಷಯ:** | 800 ಸಿವಿಲ್ ಪೊಲೀಸ್ ಕಾನ್ಸ್‌ಟೇಬಲ್ (ಪುರುಷ & ಮಹಿಳೆ) ಹುದ್ದೆಗಳ ನೇಮಕಾತಿ ಕುರಿತು |
| **ಉಲ್ಲೇಖ:** | 1) ಸರ್ಕಾರದ ಅಧಿಸೂಚನೆ ಸಂಖ್ಯೆ: ಒಇ 46 ಮೊಸಿಇ 2016. ದಿ:26/07/2016.<br>2) ಸಿವಿಲ್ ಪೊಲೀಸ್ ಕಾನ್ಸ್‌ಟೇಬಲ್ (ಪುರುಷ & ಮಹಿಳೆ) ಹುದ್ದೆಗಳ ನೇಮಕಾತಿ ಅಧಿಸೂಚನೆ ಸಂಖ್ಯೆ:09/ನೇಮಕಾತಿ–04/2019–20, ದಿ: 10/10/2019<br>3) ಎಡಿಜಿಪಿ, ನೇಮಕಾತಿ ರವರ ಅ.ಸ. ಪತ್ರ ಸಂಖ್ಯೆ:09/ನೇಮಕಾತಿ– 04/2019–20, ದಿ: 07/05/2020<br>4) ಮೊದಲನೇ ತಾತ್ಕಾಲಿಕ ಆಯ್ಕೆಪಟ್ಟಿ ದಿನಾಂಕ: 13/05/2020 |

** ~*~ **

1. ಬೆಂಗಳೂರು ನಗರದಲ್ಲಿ ಖಾಲಿ ಇರುವ 800 ಸಿವಿಲ್ ಪೊಲೀಸ್ ಕಾನ್ಸ್‌ಟೇಬಲ್ (ಪುರುಷ ಮತ್ತು ಮಹಿಳೆ) ಹುದ್ದೆಗಳನ್ನು ಭರ್ತಿ ಮಾಡಲು ಉಲ್ಲೇಖ–02ರಂತೆ ಅಧಿಸೂಚನೆಯನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗಿರುತ್ತದೆ. ಸದರಿ ಅಧಿಸೂಚನೆಯನ್ವಯ ನೇಮಕಾತಿ ಪ್ರಾಧಿಕಾರವು ಅರ್ಹ ಅಭ್ಯರ್ಥಿಗಳಿಗೆ ಲಿಖಿತ ಪರೀಕ್ಷೆಯನ್ನು ದಿನಾಂಕ: 01–12–2019 ರಂದು ನಡೆಸಿ 1:5 ಅನುಪಾತದಂತೆ ಅರ್ಹ ಅಭ್ಯರ್ಥಿಗಳಿಗೆ ದಿನಾಂಕ: 09/03/2020 ರಿಂದ 16/03/2020 ರವರೆಗೆ ಸಹಿಷ್ಣುತೆ ಮತ್ತು ದೇಹದಾರ್ಢ್ಯತೆ ಪರೀಕ್ಷೆಯನ್ನು ನಡೆಸಲಾಗಿರುತ್ತದೆ.

2. ಉಲ್ಲೇಖಿತ–03 ರಂತೆ ಎಡಿಜಿಪಿ, ನೇಮಕಾತಿ ರವರು ವೃಂದ ಮತ್ತು ನೇಮಕಾತಿ ನಿಯಮದನ್ವಯ ಮೆರಿಟ್ ಅರ್ಹತಾ ಪಟ್ಟಿಯನ್ನು ತಯಾರಿಸಿ ನೀಡಿರುತ್ತಾರೆ.

3. ಉಲ್ಲೇಖ–01 ರ ಸರ್ಕಾರದ ಅಧಿಸೂಚನೆಯನ್ವಯ ಸಹಿಷ್ಣುತೆ ಮತ್ತು ದೇಹದಾರ್ಢ್ಯತೆ ಪರೀಕ್ಷೆಯಲ್ಲಿ ಅರ್ಹರಾದ ಅಭ್ಯರ್ಥಿಗಳು ಲಿಖಿತ ಪರೀಕ್ಷೆಯಲ್ಲಿ ಪಡೆದ ಅಂಕಗಳ ಆಧಾರದ ಮೇಲೆ ಅಧಿಸೂಚಿತ ವರ್ಗಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ಅನುಗುಣವಾಗಿ 800 ಅರ್ಹ ಅಭ್ಯರ್ಥಿಗಳ ಮೊದಲನೆ ತಾತ್ಕಾಲಿಕ ಆಯ್ಕೆಪಟ್ಟಿಯನ್ನು ತಯಾರಿಸಿ ದಿನಾಂಕ 13–05–2020 ರಂದು ಪ್ರಕಟಿಸಲಾಗಿತ್ತು.